

## ರವಿಕೆಗೂ ತೋರಣ!

ಝೀ ಕನ್ನಡದ 'ಸೀತಾ ರಾಮ' ಧಾರಾವಾಹಿಯಲ್ಲಿ ಸೀತಾ ತೊಟ್ಟ ರವಿಕೆಗೆ ಹೊಸ ಡಿಸೈನ್ ಮಾಡಿಸಿದ್ದಾರೆ. ಟೀವಿ ನೋಡುತ್ತಿದ್ದ ಹೆಣ್ಣುಮಕ್ಕಳು ಅದೇನೆಂದು ಹತ್ತಿರ ಹೋಗಿ ಟೀವಿ ನೋಡಿದ್ದೇ ನೋಡಿದ್ದು! ತಾವೂ ಅಂಥದ್ದು ಮೊದಲು ಹೊಲಿಸಿ ತೊಟ್ಟು ಮಿಂಚಬೇಕೆಂದು ಯೋಚನೆಯಲ್ಲಿ ತೊಡಗಿದ್ದಾರೆ. ಇದನ್ನು ಗಮನಿಸಿದ ನಮ್ಮಜ್ಜಿ, 'ಓ ಇದು ತೋರಣದ ರವಿಕೆ! ಮನೆ ಮುಂದೆ, ಮಂಟಪ ಅಲಂಕಾರಕ್ಕೆ ತೋರಣ ನೋಡಿದ್ದಾಯಿತು. ಇದೊಂದು ಕಮ್ಮಿ ಇತ್ತು!' ಎಂದರು. ಇನ್ನು ಮುಂದೆ ಬಟ್ಟೆ ಅಂಗಡಿಗಳಲ್ಲಿ ಸೀತಾರಾಮ ಧಾರಾವಾಹಿಯ ಸೀತಾ ತೊಟ್ಟಿದ್ದ ತರಹದ ಹೊಸ ಡಿಸೈನ್ ಬ್ಲೌಸ್ ಕೊಡಿ ಎಂದು ಕೇಳಲಡ್ಡಿಯಿಲ್ಲ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ವಾರದ ಪತ್ರ

## ಒಂದೇ ದಿನಕ್ಕೆ ಮರಣ ಪ್ರಮಾಣ ಪತ್ರ!

ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ಸರ್ಕಾರಿ ಕಚೇರಿ ಮತ್ತು ಆಸ್ಪತ್ರೆಗಳನ್ನು ಬಹಳ ಕೆಟ್ಟದ್ದಾಗಿ ಚಿತ್ರಿಸಿ, ಸಮಾಜದ ಸ್ವಾಸ್ಥ್ಯ ಹಾಳುಮಾಡುವ ಸಂದೇಶಗಳನ್ನು ಬಹುತೇಕ ಧಾರಾವಾಹಿಗಳು ನೀಡುತ್ತಿವೆ. ಇದಕ್ಕೆ ಒಂದು ಉದಾಹರಣೆ, 'ಶ್ರೀರಸ್ತು ಶುಭಮಸ್ತು'ವಿನ ದತ್ತಣ್ಣನ ನೆಂಟ ಮತ್ತು ಅವನ ಮೊಮ್ಮಗಳು ಒಂದೇ ದಿನದಲ್ಲಿ ದತ್ತಣ್ಣ ಬದುಕಿರುವಾಗಲೇ ಡೆತ್ ಸರ್ಟಿಫಿಕೇಟ್ ಮಾಡಿಸಿಕೊಂಡು ಬರುವುದು. ಯಾವುದೋ ಶವ ತೋರಿಸಿ ಅದಕ್ಕೆ ದತ್ತಣ್ಣ ಎಂಬ ಲೇಬಲ್ ಹಚ್ಚುವ ಮೂಲಕ ಪ್ರೇಕ್ಷಕರನ್ನು ಮೂರ್ಖರನ್ನಾಗಿಸುವ ಪ್ರಯತ್ನವಾಗಿದೆ. ಸಾಲದೆಂಬಂತೆ ಸರ್ಕಾರಿ ಆಸ್ಪತ್ರೆಗಳ ಸೇವೆ, ಬ್ಯಾಂಕ್, ದೇವಸ್ಥಾನಗಳಲ್ಲಿ ಖಳನಾಯಕಿಯರ ಕಾಟ ದಿನೇ ದಿನೇ ಹೆಚ್ಚಾಗುತ್ತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಳೆಯಲ್ಲಿ ಸೂಟು ಬೂಟು

ಇತ್ತೀಚಿನ ಮಳೆ, ಪ್ರವಾಹ ಮತ್ತು ಗುಡ್ಡ ಕುಸಿತಗಳನ್ನು ವರದಿ ಮಾಡುವಲ್ಲಿ ಸುದ್ದಿವಾಹಿನಿಗಳು ಭಾರೀ ಶ್ರಮವಹಿಸಿವೆ. ಇದನ್ನು ಜಗತ್ತಿಗೆ ತೋರಿಸುವಲ್ಲಿ ತಾವೇ ಮೊದಲಿಗರು ಮತ್ತು ತಾವೊಬ್ಬರೇ ಎನ್ನುವ ಧಾವಂತದಲ್ಲಿ ವಾಹಿನಿಯೊಂದರ ವರದಿಗಾರರು ಸೂಟು–ಬೂಟು ಮತ್ತು ಟೈ ಧರಿಸಿ ಮಳೆಯಲ್ಲಿ ತೋಯುತ್ತಾ ವರದಿ ಮಾಡುತ್ತಿರುವುದು ಸರಿ ಕಾಣಲಿಲ್ಲ.

ಇದು ವರದಿಗಾರಿಕೆ ಹೊಸ ಆಯಾಮವೋ ಅಥವಾ ಮೊದಲೇ ತಾವೇ ಎಂದು ತೋರಿಸುವ ಧಾವಂತದಲ್ಲಿ ಉಡುಪು ಬದಲಿಸಲೂ ಸಮಯ ಸಿಗದ ಅವಸರವೋ ತಿಳಿಯದು. ಆದರೆ ಈ ಠಾಕುಠೀಕುತನ ದುರಂತದ ಸಂದರ್ಭದಲ್ಲಿ ಸರಿಯಲ್ಲ.

—ರಮಾನಂದ ಶರ್ಮಾ, ಬೆಂಗಳೂರು

## ಲಕ್ಷ್ಮಿಯರು ಬಡವಾದರೆ?





ಕಲರ್ಸ್ ಕನ್ನಡ ವಾಹಿನಿಯ 'ಭಾಗ್ಯಲಕ್ಷ್ಮಿ' ಹಾಗೂ 'ಲಕ್ಷ್ಮಿ ಬಾರಮ್ಮ' ಅಕ್ಕ ತಂಗಿಯರ ಕಥೆಗಳು ನಮ್ಮ ಮೆಚ್ಚಿನ ಧಾರಾವಾಹಿಗಳಾಗಿದ್ದವು. ಕೆಲವು ತಿಂಗಳಿನಿಂದ ಈ ಎರಡೂ ಧಾರಾವಾಹಿಗಳು ಸೂತ್ರವಿಲ್ಲದ ಹಡಗಿನಂತೆ ಎತ್ತೆತ್ತಲೋ ಸಾಗುತ್ತಿವೆ. ಜಾಣ ವೀಕ್ಷಕರಿಗೆ ಮಂಕುಬೂದಿ ಎರಚುತ್ತಿರುವುದು ಸೋಜಿಗ ಹುಟ್ಟಿಸಿದೆ.

ಭಾಗ್ಯಲಕ್ಷ್ಮಿಯ ಶ್ರೇಷ್ಠಾಳನ್ನು ಪೆದ್ದಿ ಮಾಡಲು ಹಿತಾ ಸನ್ಯಾಸಿ ವೇಷವನ್ನು ಧರಿಸಿದರೆ, ಸುಂದರಿ ಹಾಗೂ ಪೂಜಾ ವೇಷವನ್ನು ಹಾಕಿಕೊಂಡು ಮಾಟ–ಮಂತ್ರ ಎಂದು ಬೂದಿ ಎರಚುತ್ತಾರೆ.

'ಲಕ್ಷ್ಮಿ ಬಾರಮ್ಮ'ದಲ್ಲಿ ವೈಷ್ಣವ್‌ನನ್ನು ಮದುವೆ ಆಗಲೇಬೇಕು ಎಂದು ಹಟ ಹಿಡಿದ ಕೀರ್ತಿ ಕಿಡ್ನಾಪ್ ಮಾಡಿದ ವಿಷಯವನ್ನು ಭೇದಿಸಲು ತಮ್ಮ ತಾಯಿಯಿಂದ ಹಣ ಪಡೆದು ಅಪಹರಣಕಾರರ ಜೊತೆ ಸೇರುತ್ತಾಳೆ. ಕಥಾಹಂದರ ಜೊಳ್ಳಾಗಿದೆ ಎನ್ನಲು ಇನ್ನೇನು ಬೇಕು?

—ಪ್ರಿಯಾಂಕಾ, ಬೆಂಗಳೂರು

## ಮಗುವಿಗೆ ವಿಷ ಉಣಿಸಬಹುದೆ?

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯಲ್ಲಿ ಮಗುವಿಗೆ ವಿಷ ಉಣಿಸುವ ಪ್ರಯತ್ನದ ದೃಶ್ಯವಿದೆ. ಇಂತಹ ಕ್ರೌರ್ಯವನ್ನು ತೋರಿಸುವುದು ಮನೆಯಲ್ಲಿ ಕುಟುಂಬ ಸಮೇತ ಧಾರಾವಾಹಿ ನೋಡುವ ವೀಕ್ಷಕರಿಗೆ ಮುಜುಗರ ತರಿಸುತ್ತದೆ. ಧಾರಾವಾಹಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಕೆಟ್ಟದ್ದನ್ನೇ ತೋರಿಸುತ್ತ ಕಾಲಹರಣ ಮಾಡುವುದನ್ನು ನಿಯಂತ್ರಿಸುವವರು ಇಲ್ಲದಂತಾಗಿದೆ.

—ಮಾಧವ ಉದ್ಯಾವರ, ಮೈಸೂರು

## ಅಸಹಜ ಸನ್ನಿವೇಶಗಳ ಮೆರವಣಿಗೆ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಕಥೆಯಲ್ಲಿ ಆಶ್ರಯ ನೀಡಿದವರನ್ನೇ ಆಪೋಶನ ತೆಗೆದುಕೊಳ್ಳುತ್ತಾರೆ. ಸಮಾಜದಲ್ಲಿ ಇದೆಲ್ಲ ಸರ್ವೇಸಾಮಾನ್ಯ. ಇದಕ್ಕೆ ಪ್ರತಿರೂಪ ಎನ್ನುವಂತೆ ರಾಧಾ ಎಂಬ ಪಾತ್ರ ಎದುರಾಗುತ್ತದೆ. ಆಕೆ ಪ್ರತಿ ಹಂತದಲ್ಲೂ ಸ್ನೇಹಾಳನ್ನು ಅವಮಾನಿಸುತ್ತಲೇ ಇರುತ್ತಾಳೆ. ಕಾಯಿಲೆಗೆ ತುತ್ತಾಗಿರುವ ಬಂಗಾರಮ್ಮನ ಗಂಡ ಹುಷಾರಾಗದಂತೆ ತೊಂದರೆ ಕೊಡುವುದು, ಕೌಟುಂಬಿಕ ಗುಟ್ಟನ್ನು ಜಾಹೀರು ಮಾಡುವುದು, ಸ್ನೇಹಾಳ ಹತ್ಯೆಗೆ ಸುಪಾರಿ ನೀಡುವುದು — ಹೀಗೆ ಅಸಹಜ ಸನ್ನಿವೇಶಗಳೇ ಹೆಚ್ಚಾಗಿವೆ. ತರ್ಕ ಇಲ್ಲದೆ ಕಥೆಯನ್ನು ನಿರೂಪಿಸುವುದು ಯಾವ ಸಾರ್ಥಕತೆಗೆ ಎನ್ನುವುದು ಅರ್ಥ ಆಗುತ್ತಿಲ್ಲ. ನೈಜತೆ ಇಲ್ಲದೆ ಇಂತಹ ಕಾರ್ಯಕ್ರಮಗಳಿಂದ ಸಮಾಜದ ನ್ಯೂನತೆ ತಿದ್ದಲು ಸಾಧ್ಯವೇ? ಕ್ರೌರ್ಯದ ವಿಜೃಂಭಣೆ ಧಾರಾವಾಹಿ ತಂಡಕ್ಕೆ ಗೌರವ ತರುವ ಕೆಲಸ ಅಲ್ಲವೇ ಅಲ್ಲ.

—ಕೆ.ಎಸ್. ಪ್ರಭಾಕರಗುಪ್ತ, ಹಾಸನ

## ಮಕ್ಕಳೆದುರು ದಂಪತಿ ಜಗಳ ನಿಲ್ಲಿಸಿ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ಧಾರಾವಾಹಿಯಲ್ಲಿ ಭಾಗ್ಯ ಮತ್ತು ತಾಂಡವ್ ದಂಪತಿಯ ಜಗಳದಲ್ಲಿ ಆರೋಪ ಪ್ರತ್ಯಾರೋಪ ತಾರಕಕ್ಕೇರುತ್ತಿದೆ. ಆರಂಭದಿಂದಲೂ ಗಂಡ–ಹೆಂಡತಿ ಜಗಳ ನಿಂತಿಲ್ಲ. ಅದೂ ಮಕ್ಕಳ ಎದುರಿನ ಇವರ ಸಮಸ್ಯೆ ಇನ್ನೂ ನಿಂತಿಲ್ಲ. ಜಗಳದ ನಡುವೆ ಬೆಳೆಯುವ ಮಕ್ಕಳು, ಇದನ್ನು ನೋಡುವ ಮಕ್ಕಳ ಬಗ್ಗೆಯೂ ಯೋಚಿಸಬೇಕಲ್ಲವೇ?

—ಮಹಾಂತೇಶ ಎಸ್. ಪಾಟೀಲ, ಹುನಗುಂದ